

## ಸೀರೆಯೇ ಬೆಳೆಗೆ ಬೇಲಿ

ಬೀದರ್ ಜಿಲ್ಲೆಯಲ್ಲಿ ಕಾಡುಹಂದಿಗಳ ಹಾವಳಿ ತುಂಬಾ ಹೆಚ್ಚಾಗಿದೆ. ಅವುಗಳಿಂದ ರೈತರು ತಮ್ಮ ಬೆಳೆಗಳನ್ನು ರಕ್ಷಿಸಿಕೊಳ್ಳಲು ಕಂಡುಹಿಡಿದ ಉಪಾಯವೇ ಈ ಸೀರೆಯ ಬೇಲಿ. ತಂತಿಯನ್ನು ಕಟ್ಟಿ ಬೇಲಿ ನಿರ್ಮಿಸಿ ಹಂದಿಗಳ ಹಾವಳಿಯನ್ನು ನಿಯಂತ್ರಿಸುತ್ತಿದ್ದ ರೈತರ ಉಪಕ್ರಮವನ್ನು ಈ ಕಾಡು ಪ್ರಾಣಿಗಳು ಯಾವುದೇ ಅಂಜಿಲ್ಲದೇ ದಾಟುತ್ತಿದ್ದವು. ನಂತರ ಹೊಲದ ಸುತ್ತಲೂ ಟೇಪ್ ರೆಕಾರ್ಡರ್‌ನ ಕೆಟ್ಟು ಹೋದ ಕ್ಯಾಸೆಟ್‌ಗಳ ರಿಬ್ಬನ್ ಕಟ್ಟುತ್ತಿದ್ದರು. ಸಾಮಾನ್ಯವಾಗಿ ಹಂದಿಗಳು ರಾತ್ರಿ ಸಮಯದಲ್ಲಿ ಬರುವುದರಿಂದ ಆ ರಿಬ್ಬನ್‌ಗಳು ಗಾಳಿಗೆ ಅಲ್ಲಾಡಿದಾಗ ಹೊರಡುವ ಸರಬರ ಧ್ವನಿಯಿಂದ ಹೆದರುತ್ತವೆ ಎಂಬುದು ರೈತರ ನಂಬಿಕೆಯಾಗಿತ್ತು. ಇದ್ಯಾವುದಕ್ಕೂ ಕಿವಿಗೊಡದ ಹಂದಿಗಳ ಹಾವಳಿ ಹೆಚ್ಚಾದ್ದರಿಂದ ರೈತರು ಈಗ ಸೀರೆಗಳ ಮೊರೆ ಹೋಗಿದ್ದಾರೆ.

ಹೊಲದ ಸುತ್ತಲೂ ಸೀರೆಗಳನ್ನು ಕಟ್ಟಿ 'ಸೀರೆ ಬೇಲಿ' ನಿರ್ಮಿಸುವುದರಿಂದ ಎರಡು ಪ್ರಯೋಜನಗಳಿವೆ. ಹಳೆಯ ಸೀರೆಗಳಲ್ಲಿ ಹಂದಿಗಳಿಗೆ ಮನುಷ್ಯರ ವಾಸನೆ ಬರುವುದರಿಂದ ಇಲ್ಲಿ ಮನುಷ್ಯರ ಉಪಸ್ಥಿತಿ ಇದೆಯೆಂದು ಅವು ಭಾವಿಸಿ ಆ ಸ್ಥಳದತ್ತ ಸುಳಿಯಲ್ಲ. ಎರಡನೆಯದಾಗಿ ಜೋರಾಗಿ ಗಾಳಿ ಬೀಸಿದಾಗ ಸೀರೆಗಳಿಂದ ಉಂಟಾಗುವ ಕಂಪನದಿಂದ ಧ್ವನಿಯು ಕೂಡ ಹೊರಡುತ್ತದೆ. ಈ ಧ್ವನಿಯ ಹೆದರಿಕೆಗೆ ಹಂದಿಗಳು ಬೆಳೆಗಳತ್ತ ಸುಳಿಯುವುದಿಲ್ಲ. ಒಂದು ಹೊಲದ ಸುತ್ತಲು ಸೀರೆಯ ಬೇಲಿಯನ್ನು ನಿರ್ಮಿಸಲು ನೂರಾರು ಸೀರೆಗಳು ಬೇಕಾಗುತ್ತವೆ. ಆದ್ದರಿಂದ ಈಗ ಬೀದರ್ ಜಿಲ್ಲೆಯಲ್ಲಿ ಹಳೆಯ ಸೀರೆಗಳಿಗೆ ಬೇಡಿಕೆ ತುಂಬಾ ಹೆಚ್ಚಿದೆ. 'ಅವಶ್ಯಕತೆಯೇ ಆವಿಷ್ಕಾರದ ತಾಯಿ' ಎಂಬ ಮಾತು ಇಲ್ಲಿ ನಿಜವಾಗಿದೆ.

—ಮುರಲೀಧರ ಕುಲಕರ್ಣಿ, ಬೀದರ್



## ಕಾಡಿನ ತುಡವಿ ಮತ್ತು ಪೊಟರೆ ಜೇನು

ಕಾಡು ಬೆಟ್ಟ ಸುತ್ತಾಡಿ, ಮರವೊಂದರ ಪೊಟರೆಯೊಳಗೆ ಗೂಡು ಕಟ್ಟಿದ ತುಡವಿ ಜೇನನ್ನು ಪತ್ತೆಹಚ್ಚಿ ಜೇನುತುಪ್ಪ ಸಂಗ್ರಹಿಸುವ ಹವ್ಯಾಸ ಹಲವರಿಗಿದೆ. ಪೆಟ್ಟಿಗೆಯಲ್ಲಿ ಸಾಕಿದ ಜೇನನ್ನು ತೆಗೆಯುವುದು ಒಂದು ಕ್ರಮವಾದರೆ, ಸ್ವತಂತ್ರವಾಗಿ ಅಡವಿಯಲ್ಲಿ ಗೂಡು ಮಾಡುವ ತುಡವಿ ಜೇನನ್ನು ಹುಡುಕಿ ತೆಗೆಯುವುದೇ ಒಂದು ವಿಶೇಷ ರೀತಿಯದು. ಕಣ್ಣಿಗೆ ಕಾಣದಷ್ಟು ಸಣ್ಣ ಗಾತ್ರದ ಜೇನು ನೊಣಗಳನ್ನು ಪತ್ತೆಹಚ್ಚಲು ಎಲ್ಲರಿಂದಲೂ ಸಾಧ್ಯವಾಗುವುದಿಲ್ಲ. ಜೇನು ನೊಣಗಳು ಹಾರಾಡುವ ಮತ್ತು ಅವುಗಳ ವೇಗದ ಚಲನೆಯನ್ನು ಗುರುತಿಸಿ ಯಾವ ಮರದ ಪೊಟರೆಯಲ್ಲಿ ಜೇನು ಸಂಸಾರ ಮಾಡಿದೆ ಎಂಬುದನ್ನು ನಿಖರವಾಗಿ ಹೇಳುವ ಪರಿಣತರೂ ಕಾಡಂಚಿನ ಹಳ್ಳಿಗಳಲ್ಲಿ ಇದ್ದಾರೆ.

ಕಾಡಿನಲ್ಲಿ ಪೊಟರೆ ಇರುವ ಮರಗಳು ನೂರಾರು ಇರುತ್ತವೆಯಾದರೂ ಎಲ್ಲಾ ಪೊಟರೆಗಳೂ ಜೇನಿಗೆ ಗೂಡು ಮಾಡಲು ಸೂಕ್ತ ಇರಲಾರದು. ಆ ಮರದಲ್ಲಿ ಕೆಂಪು ಇರುವೆಗಳ ಗೂಡು ಇದ್ದರೆ ಅಥವಾ ಸೂಕ್ತ ರಕ್ಷಣೆ ಪೊಟರೆಗಳಲ್ಲಿ ಇರದಿದ್ದರೆ ಜೇನು ನೊಣಗಳು ಅಂತಹ ಜಾಗದಲ್ಲಿ ಗೂಡು ಮಾಡುವುದಿಲ್ಲ. ಪ್ರತಿಯೊಂದು ತುಡವಿ ಜೇನಿನ ಗೂಡಲ್ಲೂ ಸೂಕ್ತ ಗೂಡು ಹುಡುಕುವ 'ಎಂಜಿನಿಯರ್'ಗಳು ಇರುತ್ತಾರೆ ಎಂದು ಇದರಲ್ಲಿ ಪರಿಣತರಾದ ಹಿರಿಯರೊಬ್ಬರು ಹೇಳುವಾಗ ಅವರ ಮಾತು ಸತ್ಯ ಎನಿಸಿತು. ಏಕೆಂದರೆ ಕಾಡಿನ ಅಸಂಖ್ಯಾತ ಮರಗಳನ್ನು ಗಮನಿಸಿದರೆ ಜೇನುಗೂಡು ಕೆಲವೇ ಮರಗಳ ಸುರಕ್ಷಿತ ಎನಿಸಿದ ಪೊಟರೆಯಲ್ಲಿ ಮಾತ್ರ ಗೂಡು ಮಾಡಿ ವಾಸಿಸುವುದನ್ನು ಕಾಣಬಹುದು.

—ಜೆ.ಎಂ. ಬೊಮ್ನಳ್ಳಿ

## ಬಲ್ಲಿರೇನಯ್ಯ ಇದೇನೆಂದು?

ಮನೆಯ ಸುತ್ತಮುತ್ತ ಸ್ವಚ್ಛತಾ ಕಾರ್ಯದಲ್ಲಿ ನಿರತಳಾಗಿದ್ದಾಗ ಏನೋ ಕೈಗೆ ಟುಯ್ಯ ಎಂದು ಚುಚ್ಚಿದಂತಾಗಿ ಹಾರಿ ಹೋಯಿತು. ಕೈಗೆ ಚುಚ್ಚಿದಂತಾದ ಜಾಗದಲ್ಲಿ ಇಪ್ಪತ್ತನಾಲ್ಕು ಗಂಟೆ ಉರಿ ಕಂಡುಬಂತು. ಚುಚ್ಚಿದ್ದು ಏನು ಎಂಬುದರ ಬಗ್ಗೆ ದಿನವಿಡೀ ಚಿಂತೆಯಾಗಿತ್ತು. ಉರಿ ಕಡಿಮೆಯಾಗುವ ಮೊದಲೇ ಗೆಳತಿ ಸ್ವಾತಿ ಒಂದು ಫೋಟೊ ಕಳುಹಿಸಿದಳು. ಏನಿದು ಸಂಗೀತ ವಾದ್ಯದಂತಿದೆಯಲ್ಲಾ ಎಂದು ದೃಷ್ಟಿ ಕೇಂದ್ರೀಕರಿಸಿದರೆ ನನ್ನ ಕೈಗೆ ಮುತ್ತಿಟ್ಟು ಹೋದ ಕಂಚುಗಾರದ ಗೂಡೆಂದು ಅಚ್ಚರಿಪಡುವ ಸರದಿ ನನ್ನದಾಯಿತು. ಕಂಚುಗಾರ ಕಟ್ಟಿದ ಗೂಡಂತೂ ತುಂಬಾ ಆಕರ್ಷಕವಾಗಿತ್ತು. ಒಂದು ದಿನದ ನಂತರ ಕಂಚುಗಾರನ ಕಡಿತದ ಉರಿ ಕ್ಷೀಣಿಸಿತು.

—ಅಶ್ವಿನಿಮೂರ್ತಿ ಅಯ್ಯನಕಟ್ಟೆ, ಸುಳ್ಯ



